# ಕೃಷಿ






ಇಂದಿನ ಮಳೆ ನೀರು ನಾಳಿನ ಜೀವ ಹನಿ



# ‘ನಮ್ಮ’ ಗದ್ದೆಯಲ್ಲಿ ಅರಳಿದ ‘ಜಪಾನಿ ಕಲೆ’

**ಕ್ಯಾನ್ವಾಸ್‌ಗಿಂತ ನೆಲದ ಮೇಲೆ ಮೂಡುವ ಈ ಕಲೆ ಅಪರೂಪದ್ದು. ಭತ್ತದ ಎರಡು ತಳಿಗಳ ಸಸಿಗಳನ್ನು ಚಿತ್ರದ ಆಕಾರದಲ್ಲಿ ನಾಟಿ ಮಾಡಿದ ಯುವ ರೈತ ಆಂಜನೇಯ ಅವರ ಪ್ರಯತ್ನ ಸಫಲವಾಗಿದೆ. ಅಂದ ಹಾಗೆ ಇದು ಜಪಾನಿ ಕಲೆ. ಮೊದಲ ಬಾರಿಗೆ ನಮ್ಮ ನೆಲದಲ್ಲಿ ಅರಳಿದೆ.**



ಗದ್ದೆಯಲ್ಲಿ ಎರಡು ತಳಿ ಭತ್ತಗಳಿಂದ ಅರಳಿದ ‘ಜಪಾನಿ ಕಲೆ’ ಚಿತ್ರ



ಯುವ ಕೃಷಿಕ ಆಂಜನೇಯ

ಕೇರಳದ ತಿರುವನಂತಪುರದಲ್ಲಿ ನಡೆದ ಭತ್ತದ ಉತ್ಸವದಲ್ಲಿ ಪಾಲ್ಗೊಂಡಿದ್ದ ಯುವ ರೈತ ಆಂಜನೇಯ ಅವರಿಗೆ ಅಲ್ಲಿನ ಮಳಿಗೆಯೊಂದರಲ್ಲಿ ನೋಡಿದ ಚಿತ್ರ ಗಮನ ಸೆಳೆಯಿತು. ಭತ್ತದ ಗದ್ದೆಯಲ್ಲಿ ಬಣ್ಣ ಬಣ್ಣದ ಚಿತ್ರಗಳು! ಹಾಗೆಂದು ಚಿತ್ರವನ್ನೇನೂ ಬರೆದಿರಲಿಲ್ಲ. ಬದಲಾಗಿ ಗದ್ದೆಯಲ್ಲಿ ವಿವಿಧ ಭತ್ತದ ತಳಿಗಳ ನಾಟಿಯಿಂದ ಆ ಚಿತ್ರಗಳು ಮೂಡಿದ್ದವು.

‘ನಮ್ಮ ಗದ್ದೆಯಲ್ಲೂ ಇಂಥದೊಂದು ಚಿತ್ರ ಮೂಡಿದರೆ ಹೇಗಿದ್ದೀತು?’ ಎಂಬ ವಿಚಾರ ಅವರ ಮನಸ್ಸಿನಲ್ಲಿ ಮೂಡಿತು. ಅಂತಹ ಒಂದು ಪ್ರಯತ್ನವನ್ನಂತೂ ಮಾಡೋಣ ಎಂಬ ನಿರ್ಧಾರದೊಂದಿಗೆ ಅವರು ಊರಿಗೆ (ಹರಿಹರ ತಾಲ್ಲೂಕಿನ ಕುಂಬಳೂರು) ವಾಪಸಾದರು.

### ಜಪಾನಿ ಕಲೆ

ಭತ್ತದ ಗದ್ದೆಯಲ್ಲಿ ಚಿತ್ರ ಮೂಡಿಸುವ ಈ ಕಲೆ ‘ಜಪಾನಿ ಕಲೆ’ ಎಂದೇ ಪ್ರಸಿದ್ಧಿಯಾಗಿದೆ. ಆ ದೇಶದಲ್ಲಿ ಸ್ಥಳೀಯ ತಳಿಗಳ ಭತ್ತದ ಸಸಿಗಳನ್ನು ಬಳಸಿಕೊಂಡು ಹತ್ತಾರು ಎಕರೆ ಗದ್ದೆಗಳಲ್ಲಿ ಚಿತ್ರಗಳ ವಿನ್ಯಾಸ ಮಾಡುತ್ತಾರೆ. ಇದು ಆ ನೆಲದ ಸಾಂಪ್ರದಾಯಿಕ ತಳಿಗಳನ್ನು ಉಳಿಸಿಕೊಳ್ಳುವ ಪ್ರಯತ್ನದ ಭಾಗವಾಗಿ ಮತ್ತು ಪ್ರವಾಸೋದ್ಯಮದ ಆಕರ್ಷಣೆಯಾಗಿ ಬೆಳೆದಿದೆ. ಜಪಾನಿಗೆ ಬರುವ ವಿದೇಶಿಯರು ದುಬಾರಿ ಶುಲ್ಕ ತೆತ್ತು ಗದ್ದೆಯಲ್ಲಿರುವ ಚಿತ್ರಗಳನ್ನು ನೋಡುತ್ತಾರೆ.

ಗದ್ದೆಯಲ್ಲಿ ಅರಳುವ ಕಲೆ ಹಲವು ಹಂತಗಳಲ್ಲಿ ನಡೆಯುತ್ತದೆ. ಸಮತಟ್ಟಾದ ಗದ್ದೆಯನ್ನು ಆಯ್ದುಕೊಂಡು, ನೆಲ ಹದಗೊಳಿಸುತ್ತಾರೆ. ಹೆಲಿಕಾಪ್ಟರ್‌ನಲ್ಲಿ ಮೇಲಕ್ಕೆ ಹಾರುವ ವಿನ್ಯಾಸಕರು, ಅಲ್ಲಿಂದ ಸ್ಲೈಡ್ ಬಳಸಿ ಲೇಸರ್ ಕಿರಣಗಳ ಮೂಲಕ ಗದ್ದೆಯ ಮೇಲೆ ಚಿತ್ರಗಳನ್ನು ಮೂಡಿಸುತ್ತಾರೆ.

ಈ ಬೆಳಕಿನ ರೇಖೆಗಳ ಗುಂಟ ಗೆರೆ ಎಳೆದು, ಅದಕ್ಕೆ ತಕ್ಕಂಥ ಭತ್ತದ ತಳಿಗಳ ಸಸಿಗಳನ್ನು ನಾಟಿ ಮಾಡಲಾಗುತ್ತದೆ. ಪ್ರಾಣಿ, ಪಕ್ಷಿಗಳು, ರೈತ ಕುಟುಂಬ, ಮಹಿಳೆ– ಮಗು ಇಂಥವೇ ಹಲವು ಬಗೆಯ ಚಿತ್ರಗಳಿಗೆ ಪೂರಕವಾದ ಬಣ್ಣದ ತಳಿಗಳನ್ನು ನಿಗದಿತ ಭಾಗದಲ್ಲಿ ನೆಟ್ಟು ಬೆಳೆಸುತ್ತಾರೆ. ಬೆಳೆ ಕೊಯ್ಲಿಗೆ ಬರುವ ಸಮಯಕ್ಕೆ ಗದ್ದೆಯಲ್ಲಿ ವೈವಿಧ್ಯಮಯ ಚಿತ್ರಗಳು ಅರಳಿರುತ್ತವೆ.

### ಇಲ್ಲೇನಾಯ್ತು..?:

ಸಾವಯವ ರೈತ ಆಂಜನೇಯ ತಮ್ಮ ಗದ್ದೆಯ ಕಾಲು ಎಕರೆಯಲ್ಲಿ ಇಂಥ ಪ್ರಯೋಗಕ್ಕೆ ಮುಂದಾದರು. ‘ಭತ್ತ ಉಳಿಸಿ ಆಂದೋಲನ’ದ ತನಲ್ ಸಂಸ್ಥೆಯ ಉಷಾ ಹಾಗೂ ಶ್ರೀಧರ್ ಬೆಂಬಲ ನೀಡಿದರು. ಬೆಂಗಳೂರಿನ ‘ಸಹಜ ಸಮೃದ್ಧ’ ಸಾವಯವ ರೈತರ ಸಂಘಟನೆ ಮಾರ್ಗದರ್ಶನ ನೀಡಿತು.

ಚಿತ್ರದಗುಂಟ ನಾಟಿ ಮಾಡಲು ಆಂಜನೇಯ ತಳಿಗಳನ್ನು ಹುಡುಕಬೇಕಾಯಿತು. ತಮ್ಮಲ್ಲೇ 80 ಬಗೆಯ ನಾಟಿ ತಳಿಗಳಿದ್ದರೂ ಕಪ್ಪು ಅಥವಾ ಕಂದು ಬಣ್ಣದ ಗರಿಯಿರುವ ತಳಿ ಅವರಲ್ಲಿ ಇರಲಿಲ್ಲ. ಅದಕ್ಕಾಗಿ ಹುಡುಕಾಟ ನಡೆಸಿದರು. ರಾಜ್ಯದ ವಿವಿಧ ಭತ್ತದ ಬೆಳೆಗಾರರನ್ನು ಸಂಪರ್ಕಿಸಿದರು.

ಕೊನೆಗೆ ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಗುಂಡೇನಹಟ್ಟಿ ಗ್ರಾಮದ ರೈತ ಶಂಕರ ಲಂಗೋಟಿ ಅವರಲ್ಲಿ ಸಿಕ್ಕಿದ್ದು ‘ಡಂಬಾರಸಾಳಿ’ ತಳಿ. ಅವರಲ್ಲಿದ್ದ ನಾಲ್ಕೂವರೆ ಕಿಲೋ ಭತ್ತದ ಬೀಜ ತಂದು ಸಸಿ ಮಡಿ ಮಾಡಿದರು. ಚಿತ್ರದ ಹೊರಭಾಗಕ್ಕೆ ನಾಟಿ ಮಾಡಲು ಲೋಕಲ್ ಬಾಸ್ಮತಿ ತಳಿಯ ಸಸಿಗಳನ್ನು ಬೆಳೆಸಿಕೊಂಡರು. ಇದು ನಡೆದಿದ್ದು ಜುಲೈ ಮೊದಲ ವಾರದಲ್ಲಿ.

ಗದ್ದೆಯಲ್ಲಿ ಚಿತ್ರ ಬರೆಯಲು ಮಂಡ್ಯದ ಕಲಾವಿದ ಎಂ.ಎಲ್. ಸೋಮವರದ ಬಂದರು. ಸಮತಟ್ಟಾದ ಗದ್ದೆಯ ಮೇಲೆ ರೇಖೆ ಎಳೆಯುವುದು ಸವಾಲಿನ ಕೆಲಸ ಎನಿಸಿತು. ಆ ವೇಳೆಗೆ ಗದ್ದೆಯಲ್ಲಿ ನೀರು ನಿಂತಿತ್ತು. ಕಟ್ಟಿಗೆ ತುಂಡುಗಳನ್ನು ಗದ್ದೆಯಲ್ಲಿ ನೆಟ್ಟು ಅದಕ್ಕೆ ದಾರ ಕಟ್ಟಿದರು. ದೂರದಿಂದ ನಿಂತು ನೋಡಿದರೆ ತಾಯಿ–ಮಗು ಹಾಗೂ ಹಿನ್ನೆಲೆಯಲ್ಲಿ ನವಿಲಿನ ಚಿತ್ರ ಕಾಣುವಂತಾಯಿತು.

ದಾರದಗುಂಟ ‘ಡಂಬಾರಸಾಳಿ’ ತಳಿ ನಾಟಿ ಮಾಡಿದರೆ, ಹೊರ ಭಾಗದಲ್ಲಿ ಬಾಸ್ಮತಿ ತಳಿಯ ಪೈರು ನಾಟಿ ಮಾಡಿದರು.

ಈಗ ಎರಡು ತಿಂಗಳ ಪೈರು ಬೆಳೆದು ನಿಂತಿದೆ. ಮುಕ್ಕಾಲು ಭಾಗ ಚಿತ್ರ ಗೋಚರಿಸುತ್ತಿದೆ. ‘ಮೇಲಿನಿಂದ ನೋಡಿದರೆ ಹೇಗೆ ಕಾಣುತ್ತದೆ ಎಂಬ ಕುತೂಹಲ ಇತ್ತು. ಬಾಡಿಗೆ ಕ್ರೇನ್ ತರಿಸುವಷ್ಟು ಸಾಮರ್ಥ್ಯ ನನ್ನಲ್ಲಿಲ್ಲ. ಜಂಟಿ ಕೃಷಿ ನಿರ್ದೇಶಕ ಡಾ.ಆರ್.ಜಿ.ಗೊಲ್ಲರ್ ಅವರು ವಿದ್ಯುತ್ ಇಲಾಖೆಗೆ ಮನವಿ ಮಾಡಿ ಕ್ರೇನ್ ಕಳಿಸಿದರು. ಅದರ ಮೇಲೇರಿ ಎತ್ತರದಿಂದ ಗದ್ದೆ ನೋಡಿದಾಗ ಎಷ್ಟು ಖುಷಿ ಆಯ್ತು ಗೊತ್ತೇ? ಎಂದು ಆಂಜನೇಯ ಸಂಭ್ರಮಿಸುತ್ತಾರೆ.

ಬಾಸ್ಮತಿ ತಳಿ ಎರಡೂವರೆ ಅಡಿ ಎತ್ತರಕ್ಕೆ ಬೆಳೆದರೆ, ಡಂಬಾರಸಾಳಿ ನಾಲ್ಕೂವರೆ ಅಡಿ ಎತ್ತರ ಬೆಳೆಯುತ್ತದೆ. ಗರಿಗಳ ಬಣ್ಣ ಗಾಢ ಕಂದು. ಇನ್ನೊಂದು ತಿಂಗಳವರೆಗೆ ಗದ್ದೆಯಲ್ಲಿ ಚಿತ್ರ ನೋಡಬಹುದು.

‘ಜಪಾನಿನ ಈ ಕಲೆ ಈಗ ವಿಶ್ವಖ್ಯಾತಿ ಪಡೆದಿದೆ. ಅಲ್ಲಿ ಒಮ್ಮೆಲೇ ಹತ್ತಾರು ಭತ್ತದ ತಳಿಗಳನ್ನು ಬಳಸಿ ಆಕರ್ಷಕ ಚಿತ್ರಗಳನ್ನು ರಚಿಸುತ್ತಾರೆ. ಸಾವಿರಾರು ಪ್ರವಾಸಿಗರು, ಕಲಾಸಕ್ತರು ಗದ್ದೆಗಳಿಗೆ ಭೇಟಿ ಕೊಟ್ಟು ಚಿತ್ರ ನೋಡುತ್ತಾರೆ. ಎಲ್ಲಕ್ಕಿಂತ ಮುಖ್ಯವಾಗಿ ಏಕರೂಪದ ಹೈಬ್ರಿಡ್ ತಳಿ ಭರಾಟೆ ಮಧ್ಯೆ ಸಾಂಪ್ರದಾಯಿಕ ತಳಿ ಸಂರಕ್ಷಣೆಗೂ ಇದು ನೆರವಾಗಿದೆ’ ಎಂದು ಸಹಜ ಸಮೃದ್ಧ ಬಳಗದ ನಿರ್ದೇಶಕ ಜಿ.ಕೃಷ್ಣಪ್ರಸಾದ್ ಹೇಳುತ್ತಾರೆ.

ನಮ್ಮ ರಾಜ್ಯದಲ್ಲಿ ಮೊದಲ ಬಾರಿಗೆ ಜಪಾನಿ ಚಿತ್ರಕಲೆ ಪ್ರಯೋಗ ಮಾಡಿರುವ ಆಂಜನೇಯ, ಮುಂದಿನ ಸಲ ಇನ್ನಷ್ಟು ಬಣ್ಣದ ಭತ್ತದ ತಳಿಗಳನ್ನು ಹುಡುಕಿ ಹೊಸ ಬಗೆಯ ಚಿತ್ರಗಳನ್ನು ‘ಬೆಳೆಸುವ’ ಹುಮ್ಮಸ್ಸಿನಲ್ಲಿದ್ದಾರೆ. ನಿಮ್ಮ ಗದ್ದೆಯಲ್ಲೂ ಇಂಥದೊಂದು ಚಿತ್ರ ಅರಳಿಸುವ ಉತ್ಸಾಹವಿದ್ದರೆ ಆಂಜನೇಯ ಅವರನ್ನು ಸಂಪರ್ಕಿಸಿ ಸಮಾಲೋಚನೆ ಮಾಡಬಹುದು.

ಅವರ ಮೊಬೈಲ್ ನಂಬರ್– 9972088929.

■ ಆನಂದತೀರ್ಥ ಪ್ಯಾಟಿ

# ಹೊಸಳ್ಳಿ ‘ಭಗೀರಥ’ನ ಯಶೋಗಾಥೆ



ಸೋಲಾರ್ ಡ್ರೈಯರ್‌ನಲ್ಲಿ ಒಣ ಹಾಕಿದ ಅಡಿಕೆ

**ಮಳೆಯ ನೀರನ್ನು ಸಂಗ್ರಹಿಸಿ ಭೂಮಿಯ ಅಂತರ್ಜಲ ಮಟ್ಟ ಹೆಚ್ಚಿಸಿಕೊಂಡು ಸಮೃದ್ಧ ಬೆಳೆ ತೆಗೆದ ನೂರಾರು ಉದಾಹರಣೆಗಳಿವೆ. ಶಿರಸಿ ಸಮೀಪದ ಹೊಸಳ್ಳಿಯ ರೈತರೊಬ್ಬರು ಅಂತಹ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾರೆ, ಅಡಿಕೆ ನಡುವೆ ಅರಿಶಿಣ ಬೆಳೆದಿದ್ದಾರೆ.**

ಇಪ್ಪತ್ತು ವರ್ಷಗಳಿಂದ ಇಪ್ಪತ್ತೈದು ಲಕ್ಷ ರೂಪಾಯಿಗಳಿಗೂ ಅಧಿಕ ಸಾಲ ಮಾಡಿದ್ದ ಈ ರೈತ ಇಂದು ಬ್ಯಾಂಕ್‌ನಲ್ಲಿ ಹಣ ಠೇವಣಿಯಲ್ಲಿ ಇಟ್ಟಿದ್ದಾನೆ. ಬರಡು ಭೂಮಿಯಲ್ಲಿ ಗಂಗೆಯನ್ನು ತಡೆದು ನಿಲ್ಲಿಸಿದ್ದು ಯಶಸ್ಸಿನ ಗುಟ್ಟು!

ಹೊಸಳ್ಳಿ ಶಿರಸಿಯಿಂದ ಸುಮಾರು 15ಕಿಮೀ ದೂರವಿರುವ ಹಳ್ಳಿ. ಹೊಸಳ್ಳಿಗೆ ಬಸ್ ಸೌಕರ್ಯ ಇಲ್ಲ. ಊರ ಜನರು ಬಸ್ ಹಿಡಿಯಲು ಆರು ಕಿಮೀ ದೂರ ನಡೆಯಬೇಕು. ಇಂತಹ ಕುಗ್ರಾಮದ ಪ್ರಗತಿಪರ ರೈತ ರಾಘವೇಂದ್ರ ಭಟ್ಟರ ಯಶೋಗಾಥೆ ರೈತರಿಗೆ ಮಾದರಿಯಾಗಿದೆ.

ನೀರಿಲ್ಲದ ಬರಡು ನೆಲದಲ್ಲಿ ಗಂಗೆ ಉಕ್ಕುವಂತೆ ಮಾಡಿದ ಭಟ್ಟರದು ಭಗೀರಥ ಪ್ರಯತ್ನ. ಒಂಬತ್ತು ಕೊಳವೆ ಬಾವಿ, ನಾಲ್ಕು ತೆರೆದ ಬಾವಿಗೆ ತೆಗೆಸಿದರೂ ಹನಿ ನೀರು ದೊರಕಲಿಲ್ಲ. ಲಕ್ಷಾಂತರ ರೂಪಾಯಿ ವೆಚ್ಚ ಮಾಡಿದ್ದು ವ್ಯರ್ಥವಾಯಿತು. ಭಟ್ಟರು ಹತಾಶರಾಗಲಿಲ್ಲ.

ನಂತರ ಅವರು ತಮ್ಮ ಒಂಟಿ ಮನೆ ಸುತ್ತಲಿನ ಬೆಟ್ಟ–ಗುಡ್ಡಗಳಲ್ಲಿ ಇಂಗುಗುಂಡಿಗಳನ್ನು ತೋಡಿದರು, ಸುಮಾರು 25 ಎಕರೆ ಪ್ರದೇಶದಲ್ಲಿ ಬೀಳುವ ಮಳೆ ನೀರಿನ ಪ್ರತಿ ಹನಿಯನ್ನೂ ಒಂದು ಕೆರೆಯಲ್ಲಿ ಸಂಗ್ರಹಿಸಿದರು. ಅದಕ್ಕೆ ರಾಷ್ಟ್ರೀಯ ತೋಟಗಾರಿಕಾ ಮಿಷನ್ ಯೋಜನೆಯಿಂದ ಎರಡೂವರೆ ಲಕ್ಷ ರೂಪಾಯಿ ಆರ್ಥಿಕ ನೆರವು ಪಡೆದುಕೊಂಡರು. ಮೂರು ವರ್ಷಗಳ ನಿರಂತರ ಶ್ರಮದಿಂದ ಹೊಸಳ್ಳಿಯ ಬತ್ತಿದ ಬಾವಿಗಳಲ್ಲಿ ಈಗ ನೀರು ಚಿಮ್ಮುತ್ತಿದೆ, ಮೂರು ಬೃಹತ್ ಕೆರೆಗಳಲ್ಲಿ ಎಂಟು ಅಡಿಗಳಷ್ಟು ಮಳೆ ನೀರಿನ ಸಂಗ್ರಹವಿದೆ. ಬೆಟ್ಟದ ನಡುವಿನ ಇಂಗುಗುಂಡಿಗಳಲ್ಲಿ ಜಲಸೆಲೆ ನೆಲೆನಿಂತಿದೆ. 200X80 ವಿಸ್ತಾರದ ಬೃಹತ್ ಕೆರೆ ಹಾಗೂ ಅದಕ್ಕಿಂತ ಕಿರಿದಾದ ಇನ್ನೆರಡು ಕರೆಗಳಲ್ಲಿ ಸಮೃದ್ಧ ನೀರಿದೆ.

ಶಿರಸಿಯಲ್ಲಿ ಸಾಂಪ್ರದಾಯಿಕ ಅಡಿಕೆ ಬೆಳೆಗಾರರ ಸಂಖ್ಯೆ ಹೆಚ್ಚಿದೆ. ಅಡಿಕೆಯೊಂದನ್ನೇ ನಂಬಿಕೊಂಡ ಬೆಳೆಗಾರರಿಗೆ ಸಾಲದ ಶೂಲ ತಪ್ಪಿದ್ದಲ್ಲ. ಬೆಲೆಯಿದ್ದಾಗ ಬೆಳೆಯಿಲ್ಲ, ಬೆಳೆಯಿದ್ದಾಗ ಬೆಲೆಯಿಲ್ಲ. ಹೀಗಾಗಿ ಅಪ್ಪಟ ಅಡಿಕೆ ಬೆಳೆಗಾರರಾಗಿದ್ದ ಭಟ್ಟರು ತೋಟಕ್ಕೆ ಸಮೃದ್ಧ ನೀರು ಸಿಕ್ಕ ಮೇಲೆ ಉಪ ಬೆಳೆಗಳತ್ತ ಯೋಚಿಸಿದರು. ಅಡಿಕೆ ತೋಟದಲ್ಲಿ ಮರಗಳ ನಡುವೆ ಎರಡು ಅಡಿ ಅಂತರದಲ್ಲಿ ಅರಿಶಿಣ ಬೆಳೆದರು. ಅಡಿಕೆ ತೋಟಕ್ಕೆ ಹಾಕುವ ಗೊಬ್ಬರದಲ್ಲಿ ಕಾಲು ಭಾಗ ಗೊಬ್ಬರವನ್ನು ಅರಿಶಿಣ ಗಿಡಗಳಿಗೆ ನೀಡಿದರು. ಮೇ ತಿಂಗಳಿನಲ್ಲಿ ನಾಟಿ ಮಾಡುವ ಅರಿಶಿಣ (ಏಳು ತಿಂಗಳ ಅವಧಿಯಲ್ಲಿ) ಫೆಬ್ರುವರಿ ವೇಳೆಗೆ ಕೊಯ್ಲಿಗೆ ಬರುತ್ತದೆ. ಸುದರ್ಶನ, ಸೇಲಂ ಜಾತಿಯ ಅರಿಶಿಣ ಬೆಳೆಯುವ ಅವರು ತೋಟದಲ್ಲಿ ಅರ್ಧ ಎಕರೆ ಕ್ಷೇತ್ರದಲ್ಲಿ ಸುಮಾರು 100 ಕ್ವಿಂಟಲ್ ಇಳುವರಿಯ ನಿರೀಕ್ಷೆಯಲ್ಲಿದ್ದಾರೆ. ಉತ್ತಮ ಬೆಲೆ ಇರುವ ಅರಿಶಿಣ ಲಾಭದಾಯಕ ಉಪ ಬೆಳೆ ಆಗಲಿದೆ.

### ಸೋಲಾರ್ ಡ್ರೈಯರ್

ಉಪ ಬೆಳೆ ಆಶಾದಾಯಕವಾದರೂ ಮುಖ್ಯ ಬೆಳೆ ಅಡಿಕೆಯ ಸಮಸ್ಯೆ ಇತ್ತು. ಅಕಾಲಿಕ ಮಳೆಯಿಂದ ಹಾಳಾಗುತ್ತಿರುವ ಅಡಿಕೆ ರಕ್ಷಣೆಗೆ ಹೊಸ ಪ್ರಯೋಗ ಮಾಡಿ ಸೋಲಾರ್ ಡ್ರೈಯರ್ ನಿರ್ಮಿಸಿದ್ದಾರೆ. ಮಳೆಗಾಲದಲ್ಲೂ ಸಾಮಾನ್ಯ ವಾತಾರವರಣದ ದುಪ್ಪಟು ಉಷ್ಣತೆ ಕಾಪಾಡಿಕೊಳ್ಳುವ ಡ್ರೈಯರ್‌ನಲ್ಲಿ ಹಸಿ ಅಡಿಕೆ ಕೇವಲ ಐದು ದಿನಗಳಲ್ಲಿ ಒಣಗುತ್ತದೆ. ಈ ಅಡಿಕೆಗೆ ಸಾಮಾನ್ಯ ಬಿಸಿಲಿನಲ್ಲಿ ಒಂದು ವಾರದ ಅವಧಿಯಲ್ಲಿ ಒಣಗಿದ ಅಡಿಕೆಗಿಂತ ಉತ್ತಮ ದರ ಸಿಗುತ್ತದೆ ಕಾರಣ ಡ್ರೈಯರ್‌ನಲ್ಲಿ ಒಣಗಿದ ಅಡಿಕೆಗೆ ಹೊಳಪು ಹೆಚ್ಚು. ಯುವಿ ಸ್ಟೆಬಿಲೈಸ್ಡ್ 200ಎಂಎಂ ಶೀಟ್ ಬಳಸಿ 1ಸಾವಿರ ಚದರ ಅಡಿ ಉದ್ದ 25 ಚ.ಅಡಿ ಅಗಲ ಅಳತೆಯಲ್ಲಿ ಮನೆಯ ಅಂಗಳದಲ್ಲಿ ನಿರ್ಮಿಸಿರುವ ಡ್ರೈಯರ್‌ನಲ್ಲಿ ಒಮ್ಮೆಗೆ 15 ಕ್ವಿಂಟಾಲ್ ಅಡಿಕೆ ಒಣಗಿಸಬಹುದು. ಅದರೊಂದಿಗೆ ಉಪಬೆಳೆಗಳಾದ ತೆಂಗು, ಯಾಲಕ್ಕಿ, ಕಾಳು ಮೆಣಸು ಸಹ ಗರಿಗರಿಯಾಗಿ ಒಣಗುತ್ತವೆ. ಡ್ರೈಯರ್‌ಗೆ ಭಟ್ಟರು ಖರ್ಚು ಮಾಡಿದ್ದು ರೂ.50ಸಾವಿರ ಮಾತ್ರ. ಡ್ರೈಯರ್ ಮಾಡಲು ಆಸಕ್ತಿ ಇರುವ ರೈತರಿಗೆ ಅವರು ಮಾರ್ಗದರ್ಶನ ಮಾಡುತ್ತಾರೆ. ವೆನಿಲ್ಲಾ ಸಂಸ್ಕರಣ ಘಟಕದ ಮೂಲಕ ಕಳೆದ ವರ್ಷ ರೈತರು ಬೆಳೆದ 50 ಟನ್ ವೆನಿಲ್ಲಾ ಸಂಸ್ಕರಣೆ ಮಾಡಿ ಮಾರುಕಟ್ಟೆ ಒದಗಿಸಿದ್ದಾರೆ. ಆಸಕ್ತರು ಅವರ ಅನುಭವಗಳನ್ನು ಹಂಚಿಕೊಳ್ಳಬಹುದು.

ಅವರ ಮೊಬೈಲ್ ನಂಬರ್– 9480474916.

■ ಸಂಧ್ಯಾ ಹೆಗಡೆ ಆಲ್ಮನೆ



ಹೊಸಳ್ಳಿ ಗ್ರಾಮದಲ್ಲಿ ರೂಪುಗೊಂಡ ಮಳೆ ನೀರು ಸಂಗ್ರಹ ಕೆರೆ



ಹಳದಿ ಅರಿಶಿಣದ ಹಸಿರು ಗಿಡಗಳ ನಡುವೆ ರಾಘವೇಂದ್ರಭಟ್ಟ ದಂಪತಿ



# ಏಲಕ್ಕಿಗೆ ಬಂಗಾರದ ಬೆಲೆ

**ಏಲಕ್ಕಿಗೆ ಈ ವರ್ಷ ಉತ್ತಮ ಬೆಲೆ ಬಂದಿದೆ. ಆದರೂ ಏಲಕ್ಕಿ ಬೆಳೆಯುವುದಕ್ಕೆ ರೈತರು ಹೆಚ್ಚಿನ ಆಸಕ್ತಿ ತೋರಿಸುತ್ತಿಲ್ಲ. ತಾಪಮಾನ ಹೆಚ್ಚಳವನ್ನು ಸಹಿಸಿಕೊಂಡು ಉತ್ತಮ ಇಳುವರಿ ನೀಡುವಂತಹ ಹೊಸ ತಳಿಗಳನ್ನು ಸಂಶೋಧಿಸುವ ಕೆಲಸಕ್ಕೆ ಸರ್ಕಾರ ಈಗ ಗಮನ ಕೊಡಬೇಕು.**

ಸಾಂಬಾರ ಪದಾರ್ಥಗಳಲ್ಲಿ ಏಲಕ್ಕಿಗೆ ಮೊದಲ ಸ್ಥಾನ. ಸಾಂಬಾರ ಪದಾರ್ಥಗಳ ರಾಣಿ ಎಂದೇ ಏಲಕ್ಕಿ ಗುರುತಿಸಿಕೊಂಡಿದೆ. ಏಲಕ್ಕಿಯ ಪರಿಮಳಕ್ಕೆ ಮನ ಸೋಲದವರಿಲ್ಲ. ಸಿಹಿ ಪದಾರ್ಥಗಳು ಹೆಚ್ಚು ಪ್ರಿಯವಾಗಲು ಏಲಕ್ಕಿ ಪರಿಮಳವೂ ಕಾರಣ. ಏಲಕ್ಕಿಗೆ ಸದಾ ಬೇಡಿಕೆ, ಬೆಲೆ ಎರಡೂ ಇವೆ.

ಪ್ರಸ್ತುತ ವರ್ಷ ಏಲಕ್ಕಿಗೆ ಉತ್ತಮ ಬೆಲೆ ಬಂದಿದೆ. ಈಗ ಒಂದು ಕಿಲೋ ಏಲಕ್ಕಿಗೆ ಒಂದು ಸಾವಿರ ರೂ ಬೆಲೆ ಇದೆ. ಏಲಕ್ಕಿ ಬೆಳೆಯುವುದು ಲಾಭದಾಯಕ. ಆದರೂ ಏಲಕ್ಕಿ ಬೆಳೆಯಲು ರೈತರು ಆಸಕ್ತಿ ತೋರುತ್ತಿಲ್ಲ. ವಾತಾವರಣದಲ್ಲಿ ಆಗುತ್ತಿರುವ ಬದಲಾವಣೆಗಳು ಏಲಕ್ಕಿ ಬೇಸಾಯಕ್ಕೆ ಪೂರಕವಾಗಿಲ್ಲ. ಇದಲ್ಲದೆ ಕಾರ್ಮಿಕರ ಕೊರತೆಯಿಂದಲೂ ಏಲಕ್ಕಿ ಬೇಸಾಯಕ್ಕೆ ಹಿನ್ನಡೆಯಾಗಿದೆ. ಕಳೆದ ಕೆಲ ವರ್ಷಗಳಿಂದ ತಾಪಮಾನದಲ್ಲಿ ಸತತವಾಗಿ ಏರಿಕೆಯಾಗುತ್ತಿದೆ. ಈ ಕಾರಣಗಳಿಂದ ಏಲಕ್ಕಿ ಬೆಳೆಯುವುದು ಲಾಭದಾಯಕವಾದರೂ ರೈತರು ಬೆಳೆಯಲು ಹಿಂಜರಿಯುತ್ತಿದ್ದಾರೆ.

ಏಲಕ್ಕಿ ಗಿಡಗಳು ಹೆಚ್ಚಿನ ತಾಪಮಾನ ತಾಳಿಕೊಳ್ಳುವುದಿಲ್ಲ. ಅಂತಹ ಸಂದರ್ಭಗಳಲ್ಲಿ ನೀರು ಕೊಟ್ಟು ಗಿಡಗಳನ್ನು ಉಳಿಸಿಕೊಂಡರೂ ಇಳುವರಿ ಗಣನೀಯವಾಗಿ ಕಡಿಮೆಯಾಗುತ್ತದೆ. ಏಲಕ್ಕಿ ಬೆಳೆಯುವ ರೈತರು ಉತ್ತಮ ಇಳುವರಿ ಪಡೆಯಲು ನಿರಂತರ ಶ್ರಮ ಪಡುತ್ತಲೇ ಇದ್ದಾರೆ. ಕಳೆದ ಕೆಲ ವರ್ಷಗಳಲ್ಲಿ ಏಲಕ್ಕಿ ಬೆಲೆಯಲ್ಲಿ ಹೆಚ್ಚಳ ಆಗಿರಲಿಲ್ಲ.

ನಮ್ಮ ದೇಶದಲ್ಲಿ ಕರ್ನಾಟಕ, ಕೇರಳ ಹಾಗೂ ತಮಿಳುನಾಡು ರಾಜ್ಯಗಳಲ್ಲಿ ಏಲಕ್ಕಿ ಬೆಳೆಯುತ್ತಾರೆ. ನಮ್ಮ ದೇಶದ ಏಲಕ್ಕಿ ಬೆಳೆಯುವ ಬಹುಪಾಲು ಕ್ಷೇತ್ರ ಪಶ್ಚಿಮ ಘಟ್ಟದ ಮಳೆ ಕಾಡಿನ ಪ್ರದೇಶವಾಗಿದೆ.

ಏಲಕ್ಕಿಯನ್ನು ಗ್ವಾಟೆಮಾಲಾ, ಶ್ರೀಲಂಕಾ, ವಿಯಟ್ನಾಂ, ಥೈಲಾಂಡ್, ಕಾಂಬೋಡಿಯಾ ಮತ್ತಿತರ ದೇಶಗಳಲ್ಲಿ ಬೆಳೆಯುತ್ತಾರೆ. ಗ್ವಾಟೆಮಾಲಾದಲ್ಲಿ ದೊಡ್ಡ ಪ್ರಮಾಣದಲ್ಲಿ ಏಲಕ್ಕಿಯನ್ನು ಬೆಳೆಯುತ್ತಾರೆ. ನಮ್ಮ ದೇಶದಲ್ಲಿ ಬೆಳೆಯುವ ಬಹುಪಾಲು ಏಲಕ್ಕಿಯನ್ನು ದೇಶದ ಜನರೇ ಬಳಸುತ್ತಾರೆ.

ನಮ್ಮಲ್ಲಿ ಬೆಳೆದ ಏಲಕ್ಕಿ ರಫ್ತಾಗುವುದು ಅರಬ್ ದೇಶಗಳಿಗೆ. ಸಣ್ಣ ಹಾಗೂ ದೊಡ್ಡ ಏಲಕ್ಕಿ ಸೇರಿ ಸುಮಾರು 2900 ಮೆಟ್ರಿಕ್ ಟನ್‌ಗಳಷ್ಟು ಏಲಕ್ಕಿಯನ್ನು ಭಾರತದಿಂದ ಹೊರ ದೇಶಗಳಿಗೆ ರಫ್ತಾಗುತ್ತದೆ.

ಏಲಕ್ಕಿಗೆ ಈಗ ಬೇಡಿಕೆ ಹೆಚ್ಚಿರುವ ಹಿನ್ನೆಲೆಯಲ್ಲಿ ಏಲಕ್ಕಿ ಬೆಳೆಯುವ ರೈತರಿಗೆ ಸಂಬಾರ ಮಂಡಳಿ ಪ್ರೋತ್ಸಾಹ ನೀಡುತ್ತಿದೆ. ಏಲಕ್ಕಿ ನರ್ಸರಿ ಮಾಡುವವರಿಗೆ ಹಾಗೂ ಬೆಳೆಯುವ ರೈತರಿಗೆ ಮಂಡಳಿ ಸಹಾಯ ಧನ ನೀಡುತ್ತದೆ.

ಪ್ರಸ್ತುತ ವರ್ಷ ಏಲಕ್ಕಿ ಬೆಲೆ ಹೆಚ್ಚಾಗಿರುವುದರಿಂದ ಏಲಕ್ಕಿ ಬೆಳೆಯುವ ರೈತರ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ಕೆಲಸ ಆಗಬೇಕು. ತಾಪಮಾನ ಹೆಚ್ಚಳವನ್ನು ಸಹಿಸಿಕೊಂಡು ಬೆಳೆಯುವ ಹೊಸ ತಳಿಗಳನ್ನು ಗುರುತಿಸುವ ಕೆಲಸ ಆಗಬೇಕಿದೆ. ರೈತರ ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸಿದರೆ ಏಲಕ್ಕಿ ಬೆಳೆಯುವ ಕ್ಷೇತ್ರ ಹೆಚ್ಚುವ ಸಾಧ್ಯತೆ ಇದೆ.

■ ಗಣೇಶ್ ಕಾಳೀಸರ